6. ಕೆ.ಆರ್. ಪೇಟೆ ಬಿತ್ತನೆ ಪ್ರದೇಶದಲ್ಲಿ ಉತ್ಪಾದಿಸಿ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾಗು ದ್ವಿತಳಿ ಬಿತ್ತನೆ ಗೂಡಿಗೆ ಬಿತ್ತನೆ ದರ ನೀಡುವುದು.

7. ಬೆವೊಲ್ಟೀನ್ ಅಭಿವೃದ್ಧಿಗಾಗಿ 3 ತಾಂತ್ರಿಕ ಸೇವಾ ಕೇಂದ್ರಗಳು, 2 ರೇಷ್ಮೆ ಕೃಷಿ ಕ್ಷೇತ್ರಗಳು, 1 ಮಾದರಿ ಬಿತ್ತನೆ ಕೋಠಿ ಮತ್ತು 1 ತರಬೇತಿ ಶಾಲೆಯನ್ನು ಬಲಪಡಿಸುವುದು.

8. ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ರೇಷ್ಮೆ ಬೆಳೆಗಾರರಿಗೆ ಸಾಲ ಸೌಲಭ್ಯ / ಸಹಾಯಧನ ನೀಡುವುದು.

9. ನೂತನ ತಾಂತ್ರಿಕತೆಗಳ ಅಳವಡಿಕೆಯನ್ನು ಪ್ರೋತ್ಸಾಹಿಸಲು ಕ್ಷೇತ್ರೋತ್ಸವಗಳು ಕಾರ್ಯಾಗಾರ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.

10. ಸಂಶೋಧನಾಲಯಗಳಲ್ಲಿ ಅಭಿವೃದ್ಧಿಪಡಿಸಿದ ಅಧಿಕ ಇಳುವರಿ ನೀಡುವ ಸುಧಾರಿತ ಹಿಪ್ಪನೇರಳೆ ಹಾಗೂ ರೇಷ್ಮೆ ಹುಳುವಿನ ತಳಿಗಳನ್ನು ರೈತರಿಗೆ ಒದಗಿಸುವುದು.

ಹುಬ್ಬಳ್ಳಿ–ಧಾರವಾಡದಲ್ಲಿ ಭಾರೀ ಉದ್ಯಮಗಳ ಸ್ಥಾಪನೆ

3060 (3608) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರದ ಗೋಕುಲ, ತಾರೀಹಾಳ್ ಮತ್ತು ಬೇಲೂರು ಉದ್ದಿಮೆ ಪ್ರದೇಶದಲ್ಲಿ ಎಷ್ಟು ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ನಡೆಯುತ್ತಿವೆ;

ಆ) ಈ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು; ಮತ್ತು ಇದರಲ್ಲಿ ತೊಡಗಿಸಿರುವ ಬಂಡವಾಳ ಎಷ್ಟು;

ಇ) ಹುಬ್ಬಳ್ಳಿ–ಧಾರವಾಡ ಪ್ರದೇಶದಲ್ಲಿ ಮುಂದೆ ಅವಕಾಶ ಇರುವ ಕೈಗಾರಿಕೆಗಳ ವಿವರ ನೀಡುವುದು;

ಈ) ಬೆಂಗಳೂರು ನಗರವನ್ನು ಬಿಟ್ಟು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸ್ಥಾಪನೆ ಮಾಡಲು ಸರ್ಕಾರ ಯಾವ ಯೋಜನೆ ಹಾಕಿಕೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹುಬ್ಬಳ್ಳಿ–ಧಾರವಾಡ ಮಹಾನಗರದ ಗೋಕುಲ, ತಾರೀಹಾಳ ಮತ್ತು ಬೇಲೂರು ಉದ್ದಿಮೆ ಪ್ರದೇಶದಲ್ಲಿ 16 ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ಇರುತ್ತವೆ.

ಆ) ಈ ಉದ್ದಿಮೆಗಳಲ್ಲಿ 4007 ಜನರು ಉದ್ಯೋಗ ಮಾಡುತ್ತಿದ್ದು, ರೂ. 273.57 ಕೋಟಿಗಳ ಬಂಡವಾಳ ಹೂಡಿಕೆಯಾಗಿದೆ.

ಇ) ಹೊಸ ಕೈಗಾರಿಕಾ ನೀತಿಯ ಪ್ರಕಾರ ಹುಬ್ಬಳ್ಳಿ ಧಾರವಾಡ ಪ್ರದೇಶಗಳನ್ನು ವಲಯ "ಬಿ" ಎಂದು ವರ್ಗೀಕರಿಸಲಾಗಿದೆ. ಹಾಗೂ ಉತ್ತೇಜನ ಮತ್ತು ರಿಯಾಯಿತಿಗಳನ್ನು ಯಾವುದೇ ಕೈಗಾರಿಕೆಗಳಿಗೆ ನೀಡಲಾಗುವುದು.

ಈ) ಹೊಸ ಕೈಗಾರಿಕಾ ನೀತಿಯ ಪ್ರಕಾರ ಬೆಂಗಳೂರು ಜಿಲ್ಲೆಯನ್ನು ಬಿಟ್ಟು ಎಲ್ಲಾ ಜಿಲ್ಲೆಗಳನ್ನು ವಲಯ "ಬಿ,ಸಿ, ಮತ್ತು ಡಿ" ಎಂದು ವರ್ಗೀಕರಿಸಲಾಗಿದ್ದು ಉತ್ತೇಜನ ಮತ್ತು ರಿಯಾಯಿತಿಗಳನ್ನು ಈ ವಲಯಗಳಿಗೆ ನೀಡಲಾಗಿದೆ.